# ಕರ್ನಾಟಕ ಲೋಕಾಯುಕ್ತ

ಸಂ:ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ–3591/2018/ಎಆರ್‌ಇ–14

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 16/09/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಸುಮೀರ ಮೊಹ್ಮದ ಇಮ್ರಾನ, ಅಭಿಯಂತರರು, ನಿರ್ಮಿತಿ ಕೇಂದ್ರ, ಯಾದಗಿರಿ ಜಿಲ್ಲೆ ಪ್ರಸ್ತುತ ಯೋಜನಾ ಅಭಿಯಂತರರು, ಜಿಲ್ಲಾ ನಿರ್ಮಿತಿ ಕೇಂದ್ರ, ಯಾದಗಿರಿ (2) ಶ್ರೀ ವಿಶ್ವನಾಥ, ನಿರ್ದೇಶಕರು, ನಿರ್ಮಿತಿ ಕೇಂದ್ರ, ಯಾದಗಿರಿ, ಯಾದಗಿರಿ ಜಿಲ್ಲೆ ಮತ್ತು (3) ಶ್ರೀ ಕೆ.ಎಸ್. ಕಮ್ಮಾರ್, ವಿಶೇಷ ಅಧಿಕಾರಿಗಳು, ನಿರ್ಮಿತಿ ಕೇಂದ್ರ ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

* * * * * *

1. ಶ್ರೀ. ಶಿವರಾಜ ಮುರಿಗೆಪ್ಪ ಹೆಳವರ, ನಗನೂರು, ತಾಲ್ಲೂಕು ಸುರಪುರ ಜಿಲ್ಲಾ ಯಾದಗಿರಿ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಸುಮೀರ ಮೊಹ್ಮದ ಇಮ್ರಾನ, ಅಭಿಯಂತರರು, ನಿರ್ಮಿತಿ ಕೇಂದ್ರ, ಯಾದಗಿರಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಅಧಿಕಾರ ದುರುಪಯೋಗದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಾರಾಂಶ** : ದೂರುದಾರರಾದ ಶ್ರೀ. ಶಿವರಾಜ ಮುರಿಗೆಪ್ಪ ಹೆಳವರ, ನಗನೂರು, ತಾಲ್ಲೂಕು ಸುರಪುರ ಜಿಲ್ಲಾ ಯಾದಗಿರ ಇವರು ಶ್ರೀ. ಸುಮೀರ ಮೊಹ್ಮದ ಇಮ್ರಾನ, ಇಂಜಿನಿಯರ್, ನಿರ್ಮಿತಿ ಕೇಂದ್ರ ಯಾದಗಿರಿ ಇವರ ವಿರುದ್ಧ ದಿನಾಂಕ: 11/12/2018ರಂದು ದೂರನ್ನು ಸಲ್ಲಿಸಿದ್ದು, ದೂರಿನಲ್ಲಿ 2014–15ನೇ ಸಾಲಿನಲ್ಲಿ ರೂ.7 ಲಕ್ಷ ಮತ್ತು 2015–16ನೇ ಸಾಲಿನಲ್ಲಿ ರೂ.10 ಲಕ್ಷ ಅನುದಾನವನ್ನು

ನಿರ್ಮಿತಿ ಕೇಂದ್ರ ಯಾದಗಿರಿ ಇವರು ದುರುಪಯೋಗ ಮಾಡಿಕೊಂಡಿರುತ್ತಾರೆ ಅಂತಾ ತಿಳಿಸಿರುತ್ತಾರೆ.

3. ದೂರಿನ ಜೊತೆಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಯಾದಗಿರಿ ರವರು ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ: 12/09/2018 ರಂದು ಸಲ್ಲಿಸಿದ ನಕಲು ಪ್ರತಿಯನ್ನು ಸಲ್ಲಿಸಿದ್ದು, ಆ ವರದಿಯ ಪ್ರಕಾರ ದೂರುದಾರ ಶಿವರಾಜ ಇವರು ಕೊಟ್ಟ ದಿನಾಂಕ: 09/02/2017 ರಂದು, ದಿನಾಂಕ: 07/08/2018 ರಂದು ಸುರಪುರ ತಾಲ್ಲೂಕಿನ ಕರಡಕಲ್, ಕೆಂಭಾವಿ ಮತ್ತು ನಗನೂರು ಗ್ರಾಮಗಳ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಕಾಲೋನಿಗಳಿಗೆ ಭೇಟಿ ನೀಡಿ 2014–15 ಮತ್ತು 2015–16ನೇ ಸಾಲಿನಲ್ಲಿ ಸದರಿ ಜನಾಂಗದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಸಿಸಿ ರಸ್ತೆ ಮತ್ತು ಒಳಚರಂಡಿ ನಿರ್ಮಿಸಲು ಬಿಡುಗಡೆ ಮಾಡಿದ ಅನುದಾನದಲ್ಲಿ ನಿರ್ಮಾಣ ಏಜೆನ್ಸಿಯಾದ ನಿರ್ಮಿತಿ ಕೇಂದ್ರ ಯಾದಗಿರಿ, ಇವರು ನಿರ್ವಹಿಸಿದ ಕಾಮಗಾರಿಗಳನ್ನು ಪರಿಶೀಲಿಸಿದಾಗ, ಮೇಲಿನ ಕಾಮಗಾರಿಗಳ ನಿರ್ಮಾಣಕ್ಕೆ ರೂ.5 ಲಕ್ಷ ಹಾಗೂ 10 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

4. ಆ ಪ್ರಕಾರ ನಿರ್ಮಿತಿ ಕೇಂದ್ರಕ್ಕೆ ದಿನಾಂಕ: 29/09/2015 ರಂದು ಮೊದಲನೇ ಕಂತಾಗಿ ಪ್ರತಿ ಕಾಮಗಾರಿಗಳಿಗೆ ರೂ.3.50 ಲಕ್ಷ ಮತ್ತು 7 ಲಕ್ಷ ನೀಡಲಾಗಿರುತ್ತದೆ. ಕರಡಕಲ್ ಮತ್ತು ಕೆಂಭಾವಿ ಗ್ರಾಮಕ್ಕೆ ಭೇಟಿ ನೀಡಿದಾಗ ಸದರಿ ಕಾಮಗಾರಿಗಳು ಅಂದಾಜುಪತ್ರಿಕೆಯಂತೆ ಸಿಸಿ ರಸ್ತೆ ಮತ್ತು ಒಳಚರಂಡಿ ನಿರ್ಮಿಸಬೇಕಾಗಿದ್ದು, ಕೇವಲ ಸಿಸಿ ರಸ್ತೆ ಮಾಡಲಾಗಿರುತ್ತದೆ. ರಸ್ತೆಯ ಬದಿಯಲ್ಲಿ ಒಳಚರಂಡಿ ನಿರ್ಮಿಸಿರುವುದಿಲ್ಲ ಮತ್ತು ಕಾಮಗಾರಿಯು ಮೇಲ್ನೋಟಕ್ಕೆ ಕಳಪೆ ಮಟ್ಟದ್ದಾಗಿರುತ್ತದೆ ಅಂತಾ ಕಂಡುಬಂದಿರುತ್ತದೆ. ನಿರ್ಮಿತಿ ಕೇಂದ್ರ ಯಾದಗಿರಿ ಇವರು ದಿನಾಂಕ: 11/01/2017 ರಂದು ಹಣ ಬಳಕೆ ಪ್ರಮಾಣ ಪತ್ರದೊಂದಿಗೆ ಸಲ್ಲಿಸಿದಲ ಶ್ರೀ ಸಾಯಿ ಇನ್‌ಫ್ರಾ ಕನ್ಸಲ್‌ಟೆಂಟ್ಸ್, ಬೆಂಗಳೂರು ಇವರು ನೀಡಿದ 3ತಪಾಸಣಾ ವರದಿ ಪರಿಶೀಲಿಸಲಾಗಿ 3ನೇ ಪಕ್ಷದ ತಪಾಸಣೆಗೆ

ವರದಿಯಲ್ಲಿ ಸಲ್ಲಿಸಿರುವ ಕಾಮಗಾರಿಯ ಛಾಯಾಚಿತ್ರಗಳು ಸ್ಥಳ ಪರಿಶೀಲನೆಯಲ್ಲಿ ಇದ್ದ ಕಾಮಗಾರಿಗೂ ವ್ಯತ್ಯಾಸ ಇರುತ್ತದೆ ಎಂದು ಹೇಳಿರುತ್ತಾರೆ.

5. 3ನೇ ಪಕ್ಷದ ವರದಿಯಲ್ಲಿ ಕಾಮಗಾರಿಯನ್ನು ಎಂ.ಎಲ್.ಎ. ಗ್ರ್ಯಾಂಟ್ ಲೆಕ್ಕ ಶೀರ್ಷಿಕೆಯಲ್ಲಿ ತೆಗೆದುಕೊಳ್ಳಲಾಗಿದೆ ಎಂದು ವರದಿ ನೀಡಲಾಗಿರುತ್ತದೆ. ಅಲ್ಲದೆ ಸಿಸಿ ರಸ್ತೆಯನ್ನು ಅನುದಾನ ಅಡಿಯಲ್ಲಿ ಬಿಡುಗಡೆಯಾದ ಹಣದಲ್ಲಿ ಮಾಡಲಾರದೆ ಎಂ.ಎಲ್.ಎ ಗ್ರ್ಯಾಂಟ್‌ನಲ್ಲಿ ಮಾಡಿ ಅನುದಾನ ಹಣದಲ್ಲಿ ಮಾಡಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ. ಆದ್ದರಿಂದ 7 ಲಕ್ಷ ಹಣ ದುರುಪಯೋಗ ಆಗಿರುತ್ತದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ ಅಂತಾ ವರದಿಯಲ್ಲಿ ನಮೂದು ಇರುತ್ತದೆ.

6. ಅದರಂತೆ 2015–16ನೇ ಸಾಲಿನಲ್ಲಿ ನಗನೂರು ಗ್ರಾಮದ ಅಲೆಮಾರಿ/ಅರೆಅಲೆಮಾರಿ ಜನಾಂಗದ ಕಾಲೋನಿಯ ಸಿಸಿ ರಸ್ತೆ, ಒಳಚರಂಡಿಗೆ 10ಲಕ್ಷ ಬಿಡುಗಡೆಯಾಗಿದ್ದು, ಸದರಿ ಅನುದಾನವನ್ನು ದಿನಾಂಕ: 07/04/2016 ರಂದು ನಿರ್ಮಿತಿ ಕೇಂದ್ರ ಯಾದಗಿರಿ ಇವರಿಗೆ 10ಲಕ್ಷ ರೂ.ಗಳನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿಗೆ ನೀಡಿದ ಅನುದಾನದ ಹಣ ಬಳಕೆ ಪ್ರಮಾಣ ಪತ್ರ ಬರೆಯಲಾಗಿದ್ದರೂ ಸಹಾ ಇಲ್ಲಿಯವರೆಗೆ ಹಣ ಬಳಕೆ ಪ್ರಮಾಣ ಪತ್ರ ಮತ್ತು ತಪಾಸಣಾ ವರದಿಯನ್ನು ಸಲ್ಲಿಸಿರುವುದಿಲ್ಲ. ಸದರಿ ಸ್ಥಳಕ್ಕೆ ಭೇಟಿ ನೀಡಿದಾಗ ಸಿಸಿ ರಸ್ತೆ ಮಾತ್ರ ನಿರ್ಮಿಸಿದ್ದು ಅದು ಕಳಪೆಯಿಂದ ಕೂಡಿದ್ದು ಇರುತ್ತದೆ ಎಂದು ಕಂಡುಬಂದಿರುತ್ತದೆ ಅಂತಾ ನಮೂದಿಸಿರುತ್ತಾರೆ. ಆದ್ದರಿಂದ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕೇಳಿಕೊಂಡಿರುತ್ತಾರೆ.

7. ನಂತರ ಎದುರುದಾರ ನಂ.1 ಮತ್ತು 2 ಇವರಿಂದ ಆಕ್ಷೇಪಣೆ ಸಲ್ಲಿಸಲು ಕೇಳಿದ್ದು ಆದರೆ ಅವರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

8. ಆಯುಕ್ತರು, ಹಿಂದುಳಿದ ವರ್ಗ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಂದ ವರದಿಯನ್ನು ತರಿಸಿಕೊಳ್ಳಲು ನಿರ್ದೇಶಿಸಿದ್ದು ಇರುತ್ತದೆ. ಆ ಪ್ರಕಾರ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಈ ಸಂಸ್ಥೆಗೆ ದಿನಾಂಕ: 04/07/2019 ರಂದು ಪತ್ರ ಬರೆದು ದೂರಿನ ವಿಷಯಕ್ಕೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯನ್ನು ನೀಡಲು ಜಿಲ್ಲಾಧಿಕಾರಿಗಳು, ಯಾದಗಿರಿ ಇವರಿಗೆ ದಿನಾಂಕ: 24/06/2019ರಂದು ಕೋರಲಾಗಿರುತ್ತದೆ ಅಂತಾ ತಿಳಿಸಿರುತ್ತಾರೆ. ಆ ಪ್ರಕಾರ ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ಇವರು ಒಂದು ವರದಿಯನ್ನು ಸಲ್ಲಿಸಿದ್ದು, ವರದಿಯ ಪ್ರಕಾರ 2014-15 ಮತ್ತು 2015-16ನೇ ಸಾಲಿನಲ್ಲಿ ಅಲೆಮಾರಿ/ಅರೆಅಲೆಮಾರಿ ಜನಾಂಗದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಿಸಿ ರಸ್ತೆ ಹಾಗೂ ಒಳಚರಂಡಿ ನಿರ್ಮಾಣಕ್ಕೆ ಬಿಡುಗಡೆಯಾದ ಅನುದಾನವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಜಂಟಿ ತನಿಖೆ ಮಾಡಿ ವರದಿ ಸಲ್ಲಿಸುವಂತೆ ತಿಳಿಸಿದ್ದು, ಇದರನ್ವಯ ಜಂಟಿ ತನಿಖೆ ಕೈಗೊಂಡು ವರದಿ ಸಲ್ಲಿಸಲು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಗಮ ನಿಯಮಿತ, ಯಾದಗಿರಿ ಹಾಗೂ ಸಿವಿಲ್ ಇಂಜಿನಿಯರ್, ಎಂ.ಪಿ./ಎಂ.ಎಲ್.ಎ/ಎಂ.ಎಲ್.ಸಿ/ಲ್ಯಾಡ್ಸ್ ಸೆಕ್ಷನ್ ಜಿಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ಇವರಿಗೆ ವಹಿಸಲಾಗಿತ್ತು. ಸದರಿಯವರು ಜಂಟಿ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಿರುತ್ತಾರೆ.

9. ಸದರಿ ವರದಿಯ ಪ್ರಕಾರ 1) ಯಾದಗಿರ ಜಿಲ್ಲೆಯ ಸುರುಪುರ ತಾಲ್ಲೂಕಿನ ಕರಡಕಲ್ ಗ್ರಾಮದ ಹೆಳವರ ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಿಸಲು ಅಂದಾಜು ಮೊತ್ತ 5 ಲಕ್ಷ ರೂ. ಇದ್ದು ಇವರ ಅಭಿಪ್ರಾಯದಲ್ಲಿ 526.88 (sqm) cc road work completed, cc drain work not done. ಅದರಂತೆ 2) ಯಾದಗಿರ ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿ ಗ್ರಾಮದಲ್ಲಿ ಹೆಳವರ ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಿಸಲು ಅಂದಾಜು ಮೊತ್ತ 5ಲಕ್ಷ ರೂ.ಗಳಾಗಿದ್ದು, ಇವರ ಅಭಿಪ್ರಾಯದಲ್ಲಿ 346.25 (sqm) cc road work completed, cc drain work not done. ಅದರಂತೆ 3) ಯಾದಗಿರ ಜಿಲ್ಲೆಯ ಸುರಪುರ ತಾಲ್ಲೂಕಿನ ನಗನೂರು ಗ್ರಾಮದ ಹೆಳವರ ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ರಸ್ತೆ ನಿರ್ಮಿಸಲು

ಅಂದಾಜು ಮೊತ್ತ 10 ಲಕ್ಷ ರೂ. ಗಳಾಗಿದ್ದು, ಇವರ ಅಭಿಪ್ರಾಯದಲ್ಲಿ 596.51 (sqm) cc road work completed, cc drain work not done.

10. ಮೇಲಿನ ಕ್ರಮ ಸಂಖ್ಯೆ 1 ಮತ್ತು 2ರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ.10 ಲಕ್ಷದ ಅನುದಾನದ ಪೈಕಿ 7 ಲಕ್ಷ ಹಾಗೂ ಕ್ರಮ ಸಂಖ್ಯೆ 3ರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೂ.10 ಲಕ್ಷ ಗಳನ್ನು ಕ್ರಮವಾಗಿ ಅಂದಾಜುಪತ್ರಿಕೆಯಂತೆ ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು ವರದಿಯಲ್ಲಿ ಸದರಿ ಸ್ಥಳಗಳಲ್ಲಿ ಒಳಚರಂಡಿ ಕಾಮಗಾರಿ ಮಾಡಿರುವುದಿಲ್ಲ.

11. ಹಣ ದುರುಪಯೋಗ ಪಡಿಸಿಕೊಂಡಿರುವ ಅನುಷ್ಠಾನ ಅಧಿಕಾರಿಗಳ ವಿವರಗಳನ್ನು ಸಲ್ಲಿಸಲು ತಿಳಿಸಲಾಗಿದ್ದು, ಸದರಿ ಕಾಮಗಾರಿಯನ್ನು ನಿರ್ಮಿತ ಕೇಂದ್ರ, ಯಾದಗಿರಿ ಇವರಿಗೆ ವಹಿಸಲಾಗಿದ್ದು, ಈ ಏಜೆನ್ಸಿಯು ಈ ಕೆಳಗೆ ನಮೂದಿಸಿದ ಅಧಿಕಾರಿ/ಇಂಜಿನಿಯರ್‌ರವರು ಸದರಿ ಕಾಮಗಾರಿಯ ಅನುಷ್ಠಾನ ಅವಧಿಯಲ್ಲಿ ಕಾರ್ಯನಿರ್ವಹಿಸಿರುತ್ತಾರೆ.
   1) ಶ್ರೀ ಕೆ.ಎಸ್. ಕಮ್ಮಾರ, ವಿಶೇಷಾಧಿಕಾರಿಗಳು, ನಿರ್ಮಿತಿ ಕೇಂದ್ರ ಯಾದಗಿರಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ, ಮೊ.ನಂ.9448906910
   2) ಶ್ರೀ ಸುಮೀರ ಮೊಹ್ಮದ ಇಮ್ರಾನ, ಕಿರಿಯ ಇಂಜಿನಿಯರ್, ನಿರ್ಮಿತಿ ಕೇಂದ್ರ, ಸುರಪುರ, ಕಿರಿಯ ಇಂಜಿನಿಯರ್, ನಿರ್ಮಿತಿ ಕೇಂದ್ರ, ಸುರಪುರ.

12. ಈಗಾಗಲೇ ಶ್ರೀ ಸುಮೀರ ಮೊಹ್ಮದ ಇಮ್ರಾನ ಇವರು ಎದುರುದಾರ ನಂ.1 ಇರುತ್ತಾರೆ. ಆದರೆ ಅವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದ ಕಾರಣ ಶ್ರೀ ಕೆ.ಎಸ್ ಕಮ್ಮಾರ, ವಿಶೇಷಾಧಿಕಾರಿಗಳು, ನಿರ್ಮಿತಿ ಕೇಂದ್ರ ಯಾದಗಿರಿ, ಇವರನ್ನು ಮಾನ್ಯರು ಒಪ್ಪಿದಲ್ಲಿ ಎದುರುದಾರ ನಂ.3ನ್ನಾಗಿ ಸೇರಿಸಿಕೊಂಡು ಅವರಿಂದ ಆಕ್ಷೇಪಣೆಯನ್ನು ತರಿಸಿಕೊಳ್ಳುವುದು ಅಲ್ಲದೆ ಜಿಲ್ಲಾಧಿಕಾರಿಗಳು,

ಯಾದಗಿರಿ ರವರು ನೀಡಿದ ವರದಿಯನ್ನು ಎದುರುದಾರ ನಂ.1 ಮತ್ತು 2 ಇವರಿಗೆ ಕಳುಹಿಸಿ ಇನ್ನೊಂದು ಅವಕಾಶವನ್ನು ಕೊಟ್ಟು ಆಕ್ಷೇಪಣೆಗಳನ್ನು ಕೇಳಲಾಗಿತ್ತು.

13. 1 ರಿಂದ 3ನೇ ಎದುರುದಾರರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಸೂಚಿಸಿದ್ದು, ಆ ಪ್ರಕಾರ 1 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

14. 1ನೇ ಎದುರುದಾರರಾದ ಶ್ರೀ ಸುಮೀರ ಮೊಹ್ಮದ ಇಮ್ರಾನ ಇವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯೊಂದಿಗೆ ತಮ್ಮ ಸೇವಾ ವಿವರವನ್ನು ಸಲ್ಲಿಸಿರುವುದಿಲ್ಲ. ಇವರು ತಮ್ಮ ಆಕ್ಷೇಪಣೆಯಲ್ಲಿ ಇವರು ಯೋಜನಾ ಅಭಿಯಂತರರು, ಜಿಲ್ಲಾ ನಿರ್ಮಿತಿ ಕೇಂದ್ರ, ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರಡಕಲ್ಲ ಗ್ರಾಮದಲ್ಲಿ 526.88 ಚ.ಮೀ, ಕೆಂಭಾವಿ ಗ್ರಾಮದಲ್ಲಿ 346.25 ಚ.ಮೀ ಮತ್ತು ನಾಗನೂರು ಗ್ರಾಮದಲ್ಲಿ 596.51 ಚ.ಮೀ, ಸಿ.ಸಿ ರಸ್ತೆ ಮತ್ತು ಚರಂಡಿ ಕುರಿತು ದೂರುದಾರರು ಸಲ್ಲಿಸಿದ ದೂರು ಸುಳ್ಳು ಇರುತ್ತದೆ ಅಂತಾ ಹೇಳಿರುತ್ತಾರೆ. ಮುಂದುವರೆದು ಈ 3 ಗ್ರಾಮದಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ಆಯಾ ಸ್ಥಳಕ್ಕೆ ಅನುಗುಣವಾಗಿ ನಿರ್ಮಿಸಿದ್ದಲ್ಲದೇ 3ನೇ ತಂಡದ ತಪಾಸಣಾ ವರದಿ ಪಡೆದಿದ್ದು ಮತ್ತು ಕಾಮಗಾರಿಯನ್ನು ಸುಸ್ಥಿತಿಯಲ್ಲಿ ಹಸ್ತಾಂತರ ಮಾಡಲಾಗಿದೆ ಎಂದು ಹೇಳಿರುತ್ತಾರೆ.

15. 3ನೇ ಎದುರುದಾರರಾದ ಶ್ರೀ ಕೆ.ಎಸ್ ಕಮ್ಮಾರ್, ಹಿಂದಿನ ವಿಶೇಷ ಅಧಿಕಾರಿಗಳು, ನಿರ್ಮಿತಿ ಕೇಂದ್ರ, ಯಾದಗಿರಿ ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ತಮ್ಮ ಆಕ್ಷೇಪಣೆಯಲ್ಲಿ ತಾವು ದಿನಾಂಕ: 29/01/2015 ರಿಂದ 12/05/2016 ರವರೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಯಾದಗಿರಿ ಇಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದು, ಈ ಸಮಯದಲ್ಲಿ ಜಿಲ್ಲಾಧಿಕಾರಿಗಳು ನಗರಾಭಿವೃದ್ಧಿ

ಕೋಶದ ಕಾರ್ಯಾಲಯದ ಜೊತೆಗೆ (1) ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ, ಸುರಪುರ (2) ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ, ಶಹಪುರ (3) ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ, ಯಾದಗಿರಿ (4) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಯು.ಐ.ಡಿ.ಎಫ್.ಸಿ ಹಾಗೂ ನಿರ್ಮಿತಿ ಕೇಂದ್ರದ ವಿಶೇಷ ಅಧಿಕಾರಿಯಾಗಿ ಹೆಚ್ಚುವರಿ ಕಾರ್ಯ ನಿರ್ವಹಿಸಲು ಆದೇಶ ಮಾಡಿರುತ್ತಾರೆ. ಈ ಬಗ್ಗೆ 3ನೇ ಎದುರುದಾರರು ದಿನಾಂಕ: 13/10/2015 ರಂದು ಜಿಲ್ಲಾಧಿಕಾರಿ, ಯಾದಗಿರಿ ಇವರು ಮಾಡಿದ ಅಧೀಕೃತ ಜ್ಞಾಪನ ಪತ್ರ ಹಾಗೂ ದಿನಾಂಕ: 11/05/2016 ರಂದು ಉಪಯೋಜನಾ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ–ಎನ್.ಕೆ.ಯು.ಎಸ್.ಐ.ಪಿ ವಿಭಾಗ, ಕಲಬುರ್ಗಿ ಇವರು ಮಾಡಿದ ಆದೇಶದ ಅಧೀಕೃತ ಜ್ಞಾಪನ ಪತ್ರವನ್ನು ಸಲ್ಲಿಸಿರುತ್ತಾರೆ. ನಿರ್ಮಿತಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 4 ಜನ ಅಭಿಯಂತರರಿಗೆ ಜಿಲ್ಲೆಯ 4 ತಾಲ್ಲೂಕುಗಳ ಕಾರ್ಯವನ್ನು ನಿರ್ಮಿತಿ ಕೇಂದ್ರದ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು, ಯಾದಗಿರಿ ಇವರು ಹಂಚಿಕೆ ಮಾಡಿದ್ದರು. ಅದರಲ್ಲಿ ಸುರಪುರ ತಾಲ್ಲೂಕಿನ ಕಾಮಗಾರಿಗಳ ಕೆಲಸಗಳನ್ನು 1ನೇ ಎದುರುದಾರರಿಗೆ ಹಂಚಿಕೆ ಮಾಡಿದ್ದರು. ನಿರ್ಮಿತಿ ಕೇಂದ್ರದಲ್ಲಿ ಇವರಿಗೆ ಅಧ್ಯಕ್ಷರು, ನಿರ್ಮಿತಿ ಕೇಂದ್ರ ಹಾಗೂ ಜಿಲ್ಲಾಧಿಕಾರಿಗಳು (1) ನಿರ್ಮಿತಿ ಕೇಂದ್ರಕ್ಕೆ ಹಂಚಿಕೆಯಾದ ಅನುದಾನದಲ್ಲಿ/ಕಾಮಗಾರಿಯಲ್ಲಿ ಅಭಿಯಂತರರು ಅಂದಾಜು ಪತ್ರಿಕೆಗಳನ್ನು ತಯಾರಿಸುವಂತೆ ಕ್ರಮವಹಿಸುವುದು (2) ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ತಯಾರಿಸಿದ ಅಂದಾಜು ಪತ್ರಿಕೆಗಳನ್ನು ಪರಿಶೀಲನೆ ಮಾಡುವುದು ಹಾಗೂ (3) ಅಂದಾಜು ಪತ್ರಿಕೆಗಳನ್ನು ಆಡಳಿತಾತ್ಮಕ ಅನುಮೋದನೆಗಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದು, ಕೆಲಸಗಳನ್ನು ನಿರ್ವಹಿಸಲು ನಿರ್ದೇಶನ ನೀಡಿದ್ದರು.

16. ಮುಂದುವರೆದು ತಮ್ಮ ಆಕ್ಷೇಪಣೆಯಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಅಂದಾಜು ಪತ್ರಿಕೆಯಂತೆ ಕಾಮಗಾರಿಯನ್ನು ಮಾನ್ಯ ಅಧ್ಯಕ್ಷರು, ನಿರ್ಮಿತಿ ಕೇಂದ್ರದವರ ನಿರ್ದೇಶನದಂತೆ ಸೂಚಿಸಿದ ಅಭಿಯಂತರರಿಗೆ ಅಂದಾಜು ಪತ್ರಿಕೆಯಂತೆ ಕಾಮಗಾರಿ ನಿರ್ವಹಿಸುವುದು ಅಭಿಯಂತರರು ಜವಾಬ್ದಾರಿಯಾಗಿರುತ್ತದೆ. ಮೇಲೆ ಹೇಳಿದ 3 ಕಾಮಗಾರಿಗಳನ್ನು 1ನೇ

ಎದುರುದಾರರು ನಿರ್ವಹಿಸಿದ್ದು, ಕಾಮಗಾರಿಯನ್ನು ಯಾವುದೇ ನ್ಯೂನ್ಯತೆ ಇಲ್ಲದೇ ಪತ್ರಿಕೆಯಂತೆ ನಿರ್ವಹಿಸುವುದು ಅವರ ಜವಾಬ್ದಾರಿಯಾಗಿತ್ತು ಹಾಗೂ ಕಾಮಗಾರಿ ನಿರ್ವಹಿಸಿದ ಕುರಿತು ಸಂಪೂರ್ಣ ವಿವರದೊಂದಿಗೆ ಕಛೇರಿಗೆ ಮಾಹಿತಿಯನ್ನು ಸಲ್ಲಿಸುವುದು ಜವಾಬ್ದಾರಿಯಾಗಿತ್ತು. ಈ ಪೈಕಿ 2 ಕಾಮಗಾರಿಗಳ ರಸ್ತೆ ಕೆಲಸವನ್ನು ಅಂದಾಜು ಪತ್ರಿಕೆಗಿಂತ ಹೆಚ್ಚು ನಿರ್ವಹಿಸಿರುವ ಕುರಿತು ವರದಿ ನೀಡಿದ್ದು ಇರುತ್ತದೆ ಹಾಗೂ 3ನೇ ಕಾಮಗಾರಿಯಲ್ಲಿ ರಸ್ತೆಯಲ್ಲಿ ಅಂದಾಜು ಪತ್ರಿಕೆಗಿಂತ (613.5–596.91) 16.59 sqm. ಕಡಿಮೆ ನಿರ್ವಹಿಸಿರುವ ಕುರಿತು ಪತ್ರದಲ್ಲಿ ಉಲ್ಲೇಖಿಸಿರುತ್ತಾರೆ. ಆದರೆ ಚರಂಡಿ ಕಾಮಗಾರಿ ನಿರ್ವಹಿಸದೇ ಇರುವ ಕುರಿತು ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್ ಇವರು ಜಿಲ್ಲಾಧಿಕಾರಿ, ಯಾದಗಿರಿ ಇವರಿಗೆ ದಿನಾಂಕ: 07/06/2019 ರಂದು ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದು ಇರುತ್ತದೆ. ಕಾಮಗಾರಿಯನ್ನು ಅಂದಾಜು ಪತ್ರಿಕೆಯಲ್ಲಿ ನಮೂದಿಸಿದ ಅಳತೆಗಳಂತೆ ಸ್ಥಳದಲ್ಲಿ ಕಾಮಗಾರಿ ನಿರ್ವಹಿಸುವುದು 1ನೇ ಎದುರುದಾರರ ಸಂಪೂರ್ಣ ಜವಾಬ್ದಾರಿಯಾಗಿತ್ತು. ಕಾಮಗಾರಿಯನ್ನು ನಿರ್ವಹಿಸಿ ಸಂಪೂರ್ಣ ವರದಿಯನ್ನು ಛಾಯಾಚಿತ್ರದೊಂದಿಗೆ, 3ನೇ ಪಾರ್ಟಿಯವರ ವರದಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಬೇಕಾಗಿದ್ದು ಸಹ 1ನೇ ಎದುರುದಾರರ ಕರ್ತವ್ಯವಾಗಿರುತ್ತದೆ. ಈ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸುವುದಾಗಲೀ, ಕಾಮಗಾರಿ ಮುಕ್ತಾಯದ ಕುರಿತಾಗಲೀ ಇವರು ಯಾವುದೇ ದೃಢೀಕರಣ ನೀಡಿರುವುದಿಲ್ಲ ಹಾಗೂ ಕಾಮಗಾರಿ ನಿರ್ವಹಣೆ ಮಾಡುವುದು ಇವರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದ ಕರ್ತವ್ಯದ ವ್ಯಾಪ್ತಿಯಿಂದ ಹೊರಗಿರುತ್ತದೆ. ಕಾಮಗಾರಿಯಲ್ಲಿ ಹಣ ದುರುಪಯೋಗವಾಗಿದ್ದಲ್ಲಿ, ಕಾಮಗಾರಿ ನಿರ್ವಹಿಸದೇ ಕಡಿಮೆ ನಿರ್ವಹಿಸಿದ್ದಕ್ಕೆ 1ನೇ ಎದುರುದಾರರು ನೇರವಾಗಿ ಹಾಗೂ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ ಅಂತಾ ಹೇಳಿರುತ್ತಾರೆ.

17. ಈ ಪ್ರಕರಣದಲ್ಲಿ ಜಿಲ್ಲಾಧಿಕಾರಿಗಳು, ಯಾದಗಿರಿ ಇವರು ದಿನಾಂಕ: 24/06/2019 ರಂದು ಆಯುಕ್ತರು, ಹಿಂದುಳಿದ ವರ್ಗ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆದಿದ್ದು, ಸದರಿ ಪತ್ರದಲ್ಲಿ ಸದರಿ ಕಾಮಗಾರಿಯ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳ ಹೆಸರುಗಳನ್ನು ಸಲ್ಲಿಸಿದ್ದು, ಅದರಲ್ಲಿ 2ನೇ ಎದುರುದಾರರ ಹೆಸರು ಇರುವುದಿಲ್ಲ. 3ನೇ ಎದುರುದಾರರು ತಮ್ಮ

ಆಕ್ಷೇಪಣೆಯಲ್ಲಿ ಕೇವಲ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಅಂದಾಜುಪಟ್ಟಿಯನ್ನು ತಯಾರಿಸಿ ಕಳಿಸಿದ್ದರ ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳಿಲ್ಲದೇ ಸಹಿ ಮಾಡಿರುವುದಿಲ್ಲ ಅಂತಾ ಹೇಳಿರುತ್ತಾರೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯ ಜೊತೆಗೆ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್ ಮತ್ತು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಕೋಶದ ಅಭಿಯಂತರರ ಜಂಟಿ ತಪಾಸಣಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿಯೂ ಸಹ ಚರಂಡಿ ಮಾಡಿರುವುದಿಲ್ಲ ಅಂತಾ ನಮೂದು ಇರುತ್ತದೆ. ಆದ್ದರಿಂದ, 1ನೇ ಎದುರುದಾರರು ಅಂದಾಜುಪಟ್ಟಿಯಂತೆ ಕಾರ್ಯ ನಿರ್ವಹಿಸಿರುವುದಿಲ್ಲ ಅಂತಾ ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಅವರು ಕರ್ತವ್ಯ ಲೋಪ ಎಸಗಿರುವುದು ಕಂಡುಬರುತ್ತದೆ.

18. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, 2 ಮತ್ತು 3ನೇ ಎದುರುದಾರರನ್ನು ಈ ಪ್ರಕರಣದಿಂದ ಕೈಬಿಡಲಾಗಿದೆ. ಎದುರುದಾರ ನಂ.1 ಇವರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

19. ಆದ್ದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರಾದ ಶ್ರೀ. ಸುಮೀರ ಮೊಹ್ಮದ ಇಮ್ರಾನ, ಅಭಿಯಂತರರು, ನಿರ್ಮಿತಿ ಕೇಂದ್ರ, ಯಾದಗಿರಿ ಜಿಲ್ಲೆ (ನಿವೃತ್ತಿ ದಿನಾಂಕ ಕಡತದಲ್ಲಿ ಲಭ್ಯವಿರುವುದಿಲ್ಲ/ಸೇವಾ ವಿವರ ಸಲ್ಲಿಸಿರುವುದಿಲ್ಲ) ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14(ಎ) ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

20.ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/9/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.